# 1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ.

## ದಿನಾಂಕ 30ನೇ ಜುಲೈ 2025

## ಎಸ್.ಸಿ. 50/2025 ಮತ್ತು ಎಸ್.ಸಿ. 107/2025

**ಪಿರ್ಯಾದುದಾರರು** : ರಾಜ್ಯಪರ ಕೋಲಾರ ನಗರ ಪೋಲೀಸ್,

**- ವಿರುದ್ಧ -**

**ಆರೋಪಿತರು** : ಎ1. ಮಧುಸೂದನ್.ಕೆ ಊ ಮಧು, - ಮೃತಪಟ್ಟಿರುತ್ತಾರೆ

ಎ2. ಮನೋಜ್ ಹೆಚ್.ಜಿ Split Up in SC No.107/2025
ಬಿನ್ ಲೇಟ್ ಗಿರೀಶ್
ವಯಸ್ಸು 20 ವರ್ಷ,
ವಾಸಃ 109, 1ನೇ ಮುಖ್ಯ ರಸ್ತೆ,
1ನೇ ಕ್ರಾಸ್, ಮುನೇಶ್ವರ ಲೇಔಟ್,
ಹೆಗ್ಗನಹಳ್ಳಿ, ಮನೆಕೊಪ್ಪ ಗ್ರಾಮ,
ಗುಬ್ಬಿ ತಾಲ್ಲೂಕು, ತುಮಕೂರು.

ಎ3. ಅಭಿಲಾಷ್
ಬಿನ್.ಜಯಣ್ಣ,
ವಯಸ್ಸು 25 ವರ್ಷ,
ವಾಸಃ ಟ್ರೆಂಡ್ ಟೇಕ್ ಇಂಡಸ್ಟ್ರೀಸ್,
ಕೇಶವ ಇಂಡಸ್ಟ್ರಿಯಲ್, ಕಚುವಹಳ್ಳಿ ಗ್ರಾಮ,
ಚಿಕ್ಕಗೊಲ್ಲರಹಳ್ಳಿ, ಬೆಂಗಳೂರು.

## ದೋಷಾರೋಪಣೆ

**ಶ್ರೀಮತಿ.ಬಿ.ಎಸ್.ಜಯಶ್ರೀ.,** ಎಲ್.ಎಲ್.ಎಂ, 1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ ಅದ ನಾನು ಮೇಲ್ಕಂಡ ಆರೋಪಿಗಳಾದ ನಿಮ್ಮ ಮೇಲೆ ಕೆಳಕಂಡಂತೆ ದೋಷಾರೋಪಣೆಯನ್ನು ಮಾಡುತ್ತೇನೆ.

ದಿನಾಂಕ 17.09.2023 ರಂದು ರಾತ್ರಿ ಸುಮಾರು 10.30 ಗಂಟೆಯ ಸಮಯದಲ್ಲಿ ಸಾಕ್ಷಿ-2ರವರು ಕೋಲಾರ ನಗರದ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಸಮಿಪ ಇರುವ ಸಹನಾ ದರ್ಶಿನಿ ಹೋಟೆಲು ಮುಚ್ಚಿಕೊಂಡು ವ್ಯಾಪಾರದಿಂದ ಬಂದ ನಗದು ಹಣ ರೂ.80,000/- ಒಂದು ಕ್ಯಾಷ್ ಬ್ಯಾಗ್ ನಲ್ಲಿಟ್ಟುಕೊಂಡು ತನ್ನ ದ್ವಿಚಕ್ರ ವಾಹನ ಸಂಖ್ಯೆ ಕೆಎ-07-ವೈ-3216 ನಲ್ಲಿ ತನ್ನ

ಮನೆಗೆ ಹೋಗುತ್ತಿದ್ದಾಗ ರಾತ್ರಿ 10.45 ಗಂಟೆಯ ಸಮಯದಲ್ಲಿ ಮೃತ 1ನೇ ಆರೋಪಿ ಹಾಗೂ 2ನೇ ಮತ್ತು 3ನೇ ಆರೋಪಿತರಾದ ನಿಮ್ಮೊಂದಿಗೆ ಸಮಾನ ಉದ್ದೇಶದಿಂದ ಗುಂಪುಕಟ್ಟಿಕೊಂಡು ಸಾಕ್ಷಿ-2 ರವರ ಹಣವನ್ನು ಸುಲಿಗೆ ಮಾಡುವ ಉದ್ದೇಶದಿಂದ ಅವರನ್ನು ದ್ವಿಚಕ್ರ ವಾಹನ ಸಂಖ್ಯೆ ಕೆಎ-41-ಇಯ್ಯು-8753 ವಾಹನದಲ್ಲಿ ಹಿಂಬಾಲಿಸಿಕೊಂಡು ಹೋಗಿ ಮೃತ 1ನೇ ಆರೋಪಿಯು ಸಾಕ್ಷಿ-2ರವರ ಬಳಿ ಇದ್ದ ಕ್ಯಾಷ್ ಬ್ಯಾಗ್‌ನ್ನು ಕಿತ್ತುಕೊಳ್ಳಲು ಯತ್ನಿಸಿದ್ದು ಸಾಕ್ಷಿ-2ರವರು ಬಿಡ ದಿದ್ದಾಗ ಮೃತ 1ನೇ ಆರೋಪಿಯು ಪಂಚಿಂಗ್ ಟೂಲ್ ಆಯುಧದಿಂದ ಸಾಕ್ಷಿ-2ರವರ ತಲೆಗೆ, ಎಡಕಣ್ಣಿನ ಬಳಿಗೆ, ಎಡಹೊಟ್ಟೆಗೆ ಇತರೇ ಕಡೆಗಳಲ್ಲಿ ಹೊಡೆದು ತೀವ್ರಸ್ವರೂಪದ ರಕ್ತ ಗಾಯವನ್ನುಂಟು ಮಾಡಿದ್ದು, ಸಾಕ್ಷಿ-2ರವರ ಕ್ಯಾಷ್ ಬ್ಯಾಗ್ ನಲ್ಲಿದ್ದ ಹಣದ ಪೈಕಿ ರೂ.20,000/- ಹಣವನ್ನು ಕಿತ್ತುಕೊಂಡು ಪಲ್ಸರ್ ದ್ವಿಚಕ್ರ ವಾಹನದಲ್ಲಿ ಹೊರಟು ಹೋಗಿರುತ್ತೀರಿ. ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 392 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

(ಮೇಲ್ಕಂಡ ಆರೋಪಗಳನ್ನು ಆರೋಪಿತರಾದ ನೀವುಗಳು ಇದೇ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮತ್ತು ಸಂಜ್ಞೆಯಲ್ಲಿ ಮಾಡಿದ್ದಾರೆಂದು ಸದರಿ ಅಪರಾಧ ಕಲಂಗಳ ವಿಚಾರಣೆಯನ್ನು ಇದೇ ನ್ಯಾಯಾಲಯದಲ್ಲಿ ನಡೆಯಬೇಕೆಂದು ಈ ಹೊತ್ತು ದಿನಾಂಕ: 30.07.2025 ರಂದು ಆದೇಶಿಸುತ್ತೇನೆ.)

**(ಶ್ರೀಮತಿ.ಬಿ.ಎಸ್.ಜಯಶ್ರೀ)**
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ